ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿ.ಸಿ ನಂ 89/2025

ಸಿ ಡಬ್ಲ್ಯು ಃ-16

ಪಿ ಡಬ್ಲೂಃ 11

ಸಾಕ್ಷಿದಾರರ ಹೆಸರು ಃ ಶ್ರೀಧರ ಹೆಚ್ ಎ
ತಂದೆಯ ಹೆಸರು ಃ ಅಪ್ಪಣ್ಣ ಹೆಚ್ ಬಿ
ವಯಸ್ಸು ಃ 55 ವರ್ಷ
ಉದ್ಯೋಗ ಃ ಎ ಎಸ್ ಐ, ಎನ್ ಆರ್ ಪುರ ಪೊಲೀಸ್ ಠಾಣೆ
ವಾಸಸ್ಥಳ ಃ ಎನ್ ಆರ್ ಪುರ.

ದಿನಾಂಕಃ 14.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ

1. ನಾನು ದಿಃ 23.06.2025 ನಾನು ಠಾಣಾ ಕರ್ತವ್ಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಚಾಸಾ - 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಅದನ್ನು ನಮ್ಮ ಠಾಣಾ ಗುನ್ನಾ ಸಂಖ್ಯೆ 55/2025 ರಲ್ಲಿ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿಃ 24.06.2025 ರಂದು ಓಮಿನಿ ಕಾರ್ ಸಂಖ್ಯೆ KA 14 N 3381 ಇದರ ಮಾಲೀಕರಿಗೆ ಕಲಂ 133 ಅಡಿಯಲ್ಲಿ ನೋಟಿಸನ್ನು ಜಾರಿಗೊಳಿಸಿರುತ್ತೇನೆ. ದಿಃ 25.06.2025 ರಂದು ಈ ಪ್ರಕರಣದ ಆರೋಪಿ 1 ಮತ್ತು 2 ರವರಿಗೆ ಕಲಂ 35(3) BNSS ಕಾಯ್ದೆ ಯಡಿ ತನಿಖೆಗೆ ಹಾಜರಾಗುವಂತೆ ನೋಟಿಸನ್ನು ಜಾರಿಗೊಳಿಸಿರುತ್ತೇನೆ. ದಿಃ 26.06.2025 ರಂದು ಪ್ರತ್ಯಕ್ಷ ಸಾಕ್ಷಿಯಾದ ಚಾಸಾ-6 ರವರು ತೋರಿಸಿದ ಕನ್ಯಾಕುಮಾರಿ ಹೋಟೇಲ್ ಕಾಂಪ್ಲೆಕ್ಸ್ ಮುಂಭಾಗದ ಕೊಪ್ಪ ಕಡೆಯಿಂದ ಎನ್ ಆರ್ ಪುರ ಕಡೆಗೆ ಹೋಗುವ ಟಾರ್ ರಸ್ತೆಯಲ್ಲಿ ಪಂಚರಾದ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ಛಾಯಾಚಿತ್ರಗಳನ್ನು ತೆಗೆಸಿರುತ್ತೇನೆ. ಸದರಿ ಮಹಜರ್ ಅನ್ನು ಬೆಳಗ್ಗೆ 11.30 ರಿಂದ 12.00 ಗಂಟೆ ಅವಧಿಯಲ್ಲಿ ಮಾಡಲಾಗಿರುತ್ತದೆ.
2. ಅದೇ ದಿನ ನಮ್ಮ ಠಾಣಾ ಆವರಣದಲ್ಲಿ ರಾಜೇಶ ಇವರು ತಂದು ನಿಲ್ಲಿಸಿದ್ದ ಓಮಿನಿ

ವ್ಯಾನ್ ಸಂಖ್ಯೆ KA 14 N 3381 ಅನ್ನು ಅಮಾನತು ಪಂಚನಾಮೆಯ ಮೂಲಕ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಅಮಾನತು ಮಹಜರ ಅನ್ನು ಮಾಡಿ ಆ ಕಾಲಕ್ಕೆ ಭಾವಚಿತ್ರ ವನ್ನು ತೆಗೆಸಿರುತ್ತೇನೆ. ಹಾಗೂ ಸದರಿ ಕಾರನ್ನು ಸೊತ್ತು ಪಟ್ಟಿಯಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಮಧ್ಯಾಹ್ನ 1.45 ಗಂಟೆಗೆ ಈ ಪ್ರಕರಣದ ದೂರುದಾರರಾದ ಚಾಸಾ-1 ರವರು ಮುತ್ತಿನಕೊಪ್ಪ ಗ್ರಾಮದ ಪೆಜೊರೋ ಹೊಟೇಲ್ ಮುಂಭಾಗದಲ್ಲಿ ಘಟನೆ ಆಗಿರುತ್ತದೆ ಎಂಬ ಸ್ಥಳವನ್ನು ತೋರಿಸಿದ್ದು, ಸದರಿ ಪಂಚನಾಮೆಯಲ್ಲಿ ಪಂಚ ಸಾಕ್ಷಿದಾರರಾದ ಚಾಸಾ- 4 ಮತ್ತು 5 ಇವರ ಸಮಕ್ಷಮ ಪಂಚನಾಮೆ ಮಾಡಿ ಆ ಕಾಲಕ್ಕೆ ಸದರಿ ಸ್ಥಳದ ಭಾವಚಿತ್ರವನ್ನು ತೆಗೆಸಿರುತ್ತೇನೆ.

**3.** ಅದೇ ದಿನ ಚಾಸಾ-1 ರವರು ಆರೋಪಿತರು ತಮಗೆ ಭದ್ರಾವತಿ ಕಾರೆಹಳ್ಳಿ ಬ್ರಿಡ್ಜ್ ಕೆಳಗೆ ತಮ್ಮನ್ನು ಕರೆದುಕೊಂಡು ಹೋಗಿ ಹಲ್ಲೆ ಮಾಡಿದ ಜಾಗಾ ಇದೇ ಎಂದು ತೋರಿಸಿದ ಮೇರೆಗೆ ಸದರಿ ಸ್ಥಳದ ಪಂಚನಾಮೆಯನ್ನು ಮಧ್ಯಾಹ್ನ 4.30 ರ ಒಳಗೆ ಪಂಚರಾದ ಚಾಸಾ-4 ಮತ್ತು ಚಾಸಾ-5 ರವರ ಸಮಕ್ಷಮ ಜರುಗಿಸಿ ಆ ಕಾಲಕ್ಕೆ ಸದರಿ ಸ್ಥಳದ ಭಾವಚಿತ್ರವನ್ನು ತೆಗೆಸಿರುತ್ತೇನೆ. ದಿಃ 29.06.2025 ರಂದು R.T.O ಅಧಿಕಾರಿಗಳಿಗೆ ಓಮಿನಿ ಕಾರನ್ನು ತಪಾಸಣೆಗೆ ಒಳಪಡಿಸಿ ವರದಿ ನೀಡುವಂತೆ ಮನವಿ ಸಲ್ಲಿಸಿಕೊಂಡಿರುತ್ತೇನೆ. ದಿಃ 30.06.2025 ರಂದು P.D.O ಮುತ್ತಿನಕೊಪ್ಪ ಗ್ರಾಮ ಪಂಚಯಾತಿ ಇವರಿಗೆ ಕೃತ್ಯ ನಡೆದ ಸ್ಥಳದ ದಾಖಲಾತಿ ನೀಡುವಂತೆ ಠಾಣಾಧಿಕಾರಿ ಮನವಿ ಮಾಡಿಕೊಂಡಿರುತ್ತೇನೆ. ದಿಃ 03.07.2025 ರಂದು ಯೋಜನಾ ಅಧಿಕಾರಿಗಳು NHAI ತುಮಕೂರು ಇವರಿಗೆ ಭದ್ರಾವತಿ ತಾಲೂಕು ಕರೆಹಳ್ಳಿ ಗ್ರಾಮದ ಬಳಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 206 ರಸ್ತೆಯ ಪ್ಲೈ ಓವರ್ ಕೆಳ ಭಾಗಕ್ಕೆ ಸಂಬಂಧಪಟ್ಟ ದಾಖಲಾತಿ ನೀಡುವಂತೆ ಕೋರಿ ಠಾಣಾಧಿಕಾರಿ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಸರ್ಕಾರಿ ಆಸ್ಪತ್ರೆ ಎನ್ ಆರ್ ಪುರ ಇವರಿಗೆ ಚಾಸಾ- 1 ರವರಿಗೆ ಚಿಕಿತ್ಸೆ ನೀಡಿದ ಸಂಬಂಧ ಗಾಯದ ಪ್ರಮಾಣಪತ್ರ ನೀಡುವಂತೆ ಮನವಿ ಮಾಡಿಕೊಂಡಿರುತ್ತೇನೆ.

**4.** ದಿಃ 03.07.2025 ರಂದು ಓಮಿನಿ ಕಾರ್ ಸಂಖ್ಯೆ KA 14 N 3381 ಕಾರ್ ಮಾಲೀಕರಿಗೆ ಇಂಡಿಮ್ನಿಟಿ ಬಾಂಡ್ ಮೇಲೆ ಬಿಡುಗಡೆ ಗೊಳಿಸಿ ಆ ಕಾಲಕ್ಕೆ ಭಾವಚಿತ್ರವನ್ನು ತೆಗೆಸಿರುತ್ತೇನೆ. ಮತ್ತು ಅದೇ ದಿನ ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-6 ರಿಂದ ಚಾಸಾ-9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 04.07.2025 ರಂದು

RTO ಕಚೇರಿಯಿಂದ ವಾಹನಾ ತಪಾಸಣಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ PDO ಮುತ್ತಿನಕೊಪ್ಪ ಗ್ರಾಮ ಪಂಚಾಯತಿ ಇವರು ನೀಡಿದ ದಾಖಲೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 18.07.2025 ರಂದು ಆರೋಪಿಯು 3 ರವರಿಗೆ ಕಲಂ 35(3) BNSS ಕಾಯ್ದೆ ಯಡಿ ನೋಟಿಸನ್ನು ಜಾರಿಗೊಳಿಸಿರುತ್ತೇನೆ. ಅದೇ ದಿನ ಬುಲೆರೋ ಪಿಕ್ ಅಪ್ ವಾಹನ ಸಂಖ್ಯೆಃ KA 14 C 7379 ಮಾಲೀಕರಿಗೆ ಕಲಂ 133 ರಡಿ ನೋಟಿಸನ್ನು ಜಾರಿಗೊಳಿಸಿರುತ್ತೇನೆ. ದಿಃ 21.07.2025 ರಂದು ಚಾಸಾ-10 ರವರು ಸದರಿ ವಾಹನಕ್ಕೆ ಸಂಬಂಧಪಟ್ಟ ದಾಖಲೆಗಳು ಮತ್ತು ವಾಹನವನ್ನು ತಂದು ಹಾಜರುಪಡಿಸಿದ್ದು, ಅದನ್ನು ಪಂಚರಾದ ಚಾಸಾ-5 ಮತ್ತು ವರ್ಗೀಸ್ ಇವರ ಸಮಕ್ಷಮ ಅಮಾನತು ಮಹಜರ್ ಅನ್ನು ಮಾಡಿರುತ್ತೇನೆ. ಹಾಗೂ ಸದರಿ ವಾಹನವನ್ನು ಸ್ವತ್ತು ಪಟ್ಟಿಯಲ್ಲಿ ನಮೂದು ಮಾಡಿಕೊಂಡಿರುತ್ತೇನೆ.

**5.** ದಿಃ 21.07.2025 ರಂದು ಈ ಪ್ರಕರಣದ ಆರೋಪಿ 4 ಮತ್ತು 5 ರವರಿಗೆ ಕಲಂ 35(3) BNSS ಕಾಯ್ದೆ ಯಡಿ ನೋಟಿಸನ್ನು ಜಾರಿಗೊಳಿಸಿರುತ್ತೇನೆ. ಅದೇ ದಿನ ಎನ್‌ಆರ್ ಪುರ ಸರ್ಕಾರಿ ಆಸ್ಪತ್ರೆಯಿಂದ ಚಾಸಾ-1 ರವರಿಗೆ ಸಂಬಂಧಿಸಿದಂತೆ ಗಾಯದ ಪ್ರಮಾಣಪತ್ರವನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 23.07.2025 ರಂದು RTO ಕಚೇರಿ ಚಿಕ್ಕಮಗಳೂರು ಇವರಿಗೆ ವಾಹನ ಸಂಖ್ಯೆ KA 14 C 7379 ಅನ್ನು ತಪಾಸಣೆ ಮಾಡಿ ವರದಿ ಸಲ್ಲಿಸುವಂತೆ ಮನವಿ ಮಾಡಿರುತ್ತೇನೆ. ದಿಃ 26.07.2025 ರಂದು RTO ಕಚೇರಿಯಿಂದ ವಾಹನ ತಪಾಸಣಾ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 29.07.2025 ರಂದು ವಾಹನ ಸಂಖ್ಯೆ KA 14 C 7379 ವಾಹನವನ್ನು ನ್ಯಾಯಾಲಯದ ಆದೇಶದ ಮೇರೆಗೆ ವಾಹನದ ಮಾಲೀಕರಿಗೆ ಬಿಡುಗಡೆಗೊಳಿಸಿ ಆ ಕಾಲಕ್ಕೆ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ದಿಃ 30.08.2025 ರಂದು NHAI ರವರು ನೀಡಿದ ದಾಖಲಾತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಮತ್ತು ತನಿಖೆಯ ಕಾಲದಲ್ಲಿ ಫೋಟೋ ಮತ್ತು ವಿಡಿಯೋಗಳನ್ನು ಸಿ.ಡಿ.ಗೆ ರೈಟ್ ಮಾಡಿದ ಸಂಬಂಧ ಚಾಸಾ-15 ರವರಿಂದ ಕಲಂ 63(4) ಸಿ ಭಾರತೀಯ ಸಾಕ್ಷ ಅಧಿನಿಯಮದಡಿ ಪ್ರಮಾಣಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿತರ ವಿರುದ್ಧ ಸಾಕ್ಷಾಧಾರಗಳು ಲಭ್ಯವಾದ ಕಾರಣ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿತರನ್ನು ಹಾಗೂ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿ 1,

3 ರಿಂದ 5 ರವರು ಗೈರು ಹಾಜರಿದ್ದು ಅವರ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಮ್ಮ ತಕರಾರು ಇಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.)

**6.** ಸಾಕ್ಷಿಯು ತಾವು ಸ್ವೀಕರಿಸಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 26.06.2025 ರಂದು ಮುತ್ತಿನಕೊಪ್ಪ ಗ್ರಾಮದ ಪೆಜರೋ ಹೊಟೇಲ್ ಮುಂಭಾಗದಲ್ಲಿ ಮಾಡಿದ ಅಮಾನತು ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ನಿಪಿ-2 ಅನ್ನು ಮಾಡುವ ಕಾಲಕ್ಕೆ ತೆಗೆದ 2 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಗಿರುತ್ತದೆ. ದಿಃ 21.07.2025 ರಂದು ಪೋಲಿಸ್ ಠಾಣಾ ಆವರಣದಲ್ಲಿ ಮಾಡಿದ ವಾಹನ ಸಂಖ್ಯೆ KA 14 C 7379 ರ ಅಮಾನತು ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ನಿಪಿ-5 ಅನ್ನು ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಭಾವಚಿತ್ರವನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿರುತ್ತದೆ.

**7.** ದಿಃ 26.06.2025 ರಂದು ಕನ್ಯಾಕುಮಾರಿ ಹೊಟೇಲ್ ಮುಂಭಾಗದಲ್ಲಿ ಮಾಡಿದ ಮಹಜರ್ ಅನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ಅನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8 (ಡಿ) ಎಂದು ಗುರುತಿಸಲಾಯಿತು. ನಿಪಿ-8 ಅನ್ನು ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೆ ನಿಪಿ-9 ಎಂದು ಗುರುತಿಸಲಾಗಿರುತ್ತದೆ. ದಿಃ 26.06.2025 ರಂದು ಪೋಲಿಸ್ ಠಾಣಾ ಆವರಣದಲ್ಲಿ ಮಾಡಿದ ಓಮಿನಿ ಕಾರ್ ಸಂಖ್ಯೆ KA 14 N 3381 ಇದರ ಅಮಾನತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಅಮಾನತು ಪಂಚನಾಮೆಯನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-10(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-10 ಅನ್ನು ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಸದರಿ ಭಾವಚಿತ್ರವನ್ನು ಈಗಾಗಲೇ ನಿಪಿ-11 ಎಂದು

ಗುರುತಿಸಲಾಗಿರುತ್ತದೆ.

**8.** ಸಾಕ್ಷಿಯು ಕಲಂ 133 ಮೋಟಾರ್ ವಾಹನ ಕಾಯ್ದೆ ಯಡಿ ನೀಡಿದ ನೋಟಿಸ್ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಲಂ 133 ರ ನೋಟಿಸ್ ಗೆ ಪಡೆದ ಉತ್ತರವನ್ನು ನೋಡಿ ಗುರುತಿಸಿದ್ದು ಸದರಿ ಪ್ರತ್ಯುತ್ತರ ನೋಟಿಸು ಪ್ರತಿಯನ್ನು ಈಗಾಗಲೇ ನಿಪಿ-17 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-17 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-18 ಎಂದು ಸಾಕ್ಷಿಯ ಸಹಿಯನ್ನು ನಿಪಿ-18 (ಎ) ಎಂದು ಗುರುತಿಸಲಾಯಿತು. ದಿಃ 29.06.2025 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಇವರಿಗೆ ಓಮಿನಿ ಕಾರ್ ಸಂಖ್ಯೆ KA 14 N 3381 ಗೆ ಸಂಬಂಧಪಟ್ಟಂತೆ ಪರೀಕ್ಷೆಗೆ ಒಳಪಡಿಸಿ ವರದಿ ನೀಡುವಂತೆ ಸಲ್ಲಿಸಿದ ಮನವಿ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-19 ಎಂದು ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ದಿಃ 30.06.2025 ರಂದು P.D.O ಮುತ್ತಿನಕೊಪ್ಪ ಗ್ರಾಮ ಪಂಚಾಯತಿ ಇವರಿಗೆ ಕೃತ್ಯ ಸ್ಥಳಕ್ಕೆ ಸಂಬಂಧ ಪಟ್ಟ ದಾಖಲೆಗಳನ್ನು ನೀಡುವಂತೆ ಕೋರಿ ಠಾಣಾಧಿಕಾರಿ ಸಲ್ಲಿಸಿದ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು. ದಿಃ 03.07.2025 ರಂದು NHAI ಇವರಿಗೆ ಠಾಣಾಧಿಕಾರಿ ದಾಖಲೆಗಳನ್ನು ಒದಗಿಸುವಂತೆ ಕೋರಿ ಸಲ್ಲಿಸಿ ದ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-21 ಎಂದು ಗುರುತಿಸಲಾಯಿತು. ದಿಃ 03.07.2025 ರಂದು ವೈಧ್ಯಾಧಿಕಾರಿಗಳು ಎನ್‌ಆರ್ ಪುರ ಇವರಿಗೆ ಗಾಯದ ಪ್ರಮಾಣಪತ್ರ ನೀಡುವಂತೆ ಸಲ್ಲಿಸಿದ ಮನವಿಯ ಪ್ರತಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-22 ಎಂದು ಸಾಕ್ಷಿ ಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ದಿಃ 03.07.2025 ರಂದು ಓಮಿನಿ ಕಾರ್ ಸಂಖ್ಯೆ KA 14 N 3381 ಅನ್ನು ಇಂಡಿಮ್ನಿಟಿ ಬಾಂಡ್ ಮೇಲೆ ಬಿಡುಗಡೆ ಗೊಳಿಸಿದ್ದು ಸದರಿ ಇಂಡಿಮ್ನಿಟಿ ಬಾಂಡ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-23 ಎಂದು, ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು.

**9.** ದಿಃ 03.07.2025 ರಂದು PDO ಮುತ್ತಿನಕೊಪ್ಪ ಇವರು ನೀಡಿದ ದಾಖಲಾತಿಯ ಬಗ್ಗೆ ಮಾಹಿತಿ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-24 ಎಂದು, ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ದಿಃ 04.07.2025

ರಂದು RTO ಕಚೇರಿ ಚಿಕ್ಕಮಗಳೂರು ಇವರಿಂದ ಪಡೆದ ಓಮಿನಿ ಕಾರ್ ಸಂಖ್ಯೆ: KA 14 N 33 81 ಇದರ ವಾಹನ ತಪಾಸಣಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-25 ಎಂದು ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು. ದಿ: 21.07.2025 ರಂದು ಎನ್ ಆರ್ ಪುರ ಸರ್ಕಾರಿ ಆಸ್ಪತ್ರೆಯಿಂದ ಸ್ವೀಕರಿಸಿ ಗಾಯದ ಪ್ರಮಾಣಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿ- 26 ಎಂದು ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ದಿ: 23.07.2025 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಚಿಕ್ಕಮಗಳೂರು ಇವರಿಗೆ ಬೊಲೆರೋ ಪಿಕ್ ಅಪ್ ವಾಹನ ಸಂಖ್ಯೆ: KA 14 C 7379 ಇದರ ವಾಹನ ತಪಾಸಣಾ ಪರೀಕ್ಷೆ ಮಾಡುವಂತೆ ಕೋರಿ ಠಾಣಾಧಿಕಾರಿ ಸಲ್ಲಿಸಿದ ಮನವಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-27 ಎಂದು ಗುರುತಿಸಲಾಯಿತು. ದಿ: 26.07.2025 ರಂದು ವಾಹನ ಸಂಖ್ಯೆ: KA 14 C 7379 ಇದರ ವಾಹನ ತಪಾಸಣಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ- 28 ಎಂದು, ಸಾಕ್ಷಿಯ ಸಹಿಯನ್ನು ನಿಪಿ- 28 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಆದೇಶದ ಮೇರೆಗೆ ಬೊಲೆರೋ ಪಿಕ್ ಅಪ್ ವಾಹನ ಬಿಡುಗಡೆಗೊಳಿಸಿದ ಕಾಲಕ್ಕೆ ತೆಗೆದ 2 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-29 ಮತ್ತು ನಿಪಿ- 30 ಎಂದು ಗುರುತಿಸಲಾಯಿತು. ಸಾಕ್ಷಿಯು ಕಲಂ 63(4) ಸಿ ಅಡಿಯಲ್ಲಿ ಪಡೆದುಕೊಂಡ ಪ್ರಮಾಣಪತ್ರ ಭಾರತೀಯ ಸಾಕ್ಷ ಅಧಿನಿಯಮದಡಿ ಸ್ವೀಕರಿಸಿ ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 31 ಎಂದು, ಸಾಕ್ಷಿಯ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರ Sri. K.S.K. ವಕೀಲರಿಂದ:

**1.** ಪಿರ್ಯಾದುದಾರರು ದೂರು ಕೊಡುವ ಪೂರ್ವದಲ್ಲಿ ಘಟನೆಯ ಬಗ್ಗೆ ನಮ್ಮ ಪೋಲಿಸ್ ಠಾಣೆಗೆ ಪೋನ್ ಮುಖಾಂತರ ಘಟನೆಯ ಬಗ್ಗೆ ಹೇಳಿರುತ್ತಾರಾ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪೆಜರೋ ಹೋಟೆಲ್ ನ ಮಾಲೀಕರಾಗಲಿ ಅಥವಾ ಅಕ್ಕ-ಪಕ್ಕದ ನಿವಾಸಿಗಳು ಘಟನೆ ಯ ಕುರಿತು ನಮಗೆ ಕರೆ ಮಾಡಿ ಯಾವುದೇ ಮಾಹಿತಿ ಕೊಟ್ಟಿರುವುದಿಲ್ಲ ಎಂದರೆ ಸರಿ. ಆ ದಿನ ಓಮಿನಿ ಕಾರ್ ಸಂಖ್ಯೆ KA 14 N 3381 ತಮ್ಮ ವಾಹನಕ್ಕೆ ಅಪಘಾತ ಉಂಟು ಮಾಡಿರುತ್ತಾರೆ ಎಂಬ ಕುರಿತು ನಮ್ಮ ಠಾಣೆಗೆ ದೂರು ಕೊಟ್ಟಿರುವುದಿಲ್ಲ ಎಂದರೆ ಸರಿ. ಆ ದಿನ ಯಾವುದೇ ಘಟನೆ ನಡೆಯದೇ ಇದ್ದ ಕಾರಣ ಓಮಿನಿ ಕಾರ್ ನವರು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ ಎಂದರೆ

ಸರಿಯಲ್ಲ. ಘಟನಾ ಸ್ಥಳದ ಉತ್ತರ ದಿಕ್ಕಿಗೆ ಮಹಮ್ಮದ್ ಸಾಧಿಕ್ ಇವರ ಮನೆ ಇದ್ದು ಅಕ್ಕ-ಪಕ್ಕ ಅಂಗಡಿ ಮತ್ತು ಮನೆಗಳು ಇರುತ್ತವೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸಿರುತ್ತಾರೆ. ಕನ್ಯಾಕುಮಾರಿ ಹೋಟೇಲ್ ಬಳಿ ಪಂಚನಾಮೆ ಮಾಡಿದ್ದು ಆ ಕಾಲಕ್ಕೆ ಅಲ್ಲಿಯ ವಾಸಿಗಳನ್ನು ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-8 ರಲ್ಲಿನ ಸಾಕ್ಷಿದಾರರು ಚಾಸಾ-6 ರವರ ಹತ್ತಿರದ ಸಂಬಂಧಿಕರು ಇರುತ್ತಾರೆ ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಹಾಜರುಪಡಿಸಿರುವ ನಿಪಿ-9 ರ ಭಾವಚಿತ್ರದಲ್ಲಿ ಕನ್ಯಾಕುಮಾರಿ ಹೋಟೇಲ್ ಕಾಣುವುದಿಲ್ಲ ಎಂದರೆ ಸರಿ.

2. ಪೆಜರೋ ಹೊಟೇಲ್ ಪಕ್ಕದಲ್ಲಿ ಪೆಟ್ರೋಲ್ ಬಂಕ್ ಇರುತ್ತದೆ ಎಂದರೆ ಸರಿ. ಸದರಿ ಪೆಟ್ರೋಲ್ ಬಂಕ್ ನಲ್ಲಿ ಸಾಮಾನ್ಯವಾಗಿ CCTV ಕ್ಯಾಮೆರಾ ಅಳವಡಿಸಿರುತ್ತಾರೆ ಎಂದರೆ ಸರಿ. ನನ್ನ ತನಿಖೆಯ ಕಾಲಕ್ಕೆ ಸದರಿ ಪೆಟ್ರೋಲ್ ಬಂಕ್ ನ CCTV ಪೂಟೇಜ್ ನ ದಾಖಲೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಪೆಜರೋ ಹೊಟೇಲ್ ಮಾಲೀಕರನ್ನಾಗಲಿ ಅಥವಾ ಅಲ್ಲಿಯ ನಿವಾಸಿಗಳನ್ನು ನಿಪಿ-2 ಪಂಚನಾಮೆಗೆ ಕರೆದಿರುವುದಿಲ್ಲ ಎಂದರೆ ಸರಿ. ಮತ್ತು ಅವರನ್ನು ಮಹಜರ್ ಸಾಕ್ಷಿದಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಿಪಿ- 3 ರಲ್ಲಿ ಪೆಜರೋ ಹೊಟೇಲ್ ಕಾಣುವುದಿಲ್ಲ ಎಂದರೆ ಸರಿ. ಯಾವುದೇ ವಾಹನಗಳು ಮುತ್ತಿನಕೊಪ್ಪ ದಿಂದ ಭದ್ರಾವತಿಗೆ ಹೋಗಬೇಕಾದರೆ ಉಂಬಳೆಬೈಲು ದಾಟಿ ಹೋಗಬೇಕು ಎಂದರೆ ಸರಿ. ಉಂಬಳೆಬೈಲು ಬಳಿ ಪಾರೆಸ್ಟ್ ಚೆಕ್ ಪೋಸ್ಟ್ ಮತ್ತು CCTV ಅಳವಡಿಸಿರುತ್ತಾರೆ ಎಂದರೆ ಸರಿ. ನಾನು ನನ್ನ ತನಿಖೆಯ ಕಾಲಕ್ಕೆ ಸದರಿ CCTV ಪೂಟೇಜ್ ಅನ್ನು ಪಡೆದುಕೊಂಡಿಲ್ಲ ಎಂದರೆ ಸರಿ.

3. ಭದ್ರಾವತಿಯ ಕೆರೆಹಳ್ಳಿ ಬಿಡ್ಜ್ ಕೆಳಗೆ ಮಹಜರ್ ಮಾಡಿದ್ದು ಅಲ್ಲಿನ ಸ್ಥಳೀಯರನ್ನು ಮಹಜರ್ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-6 ರಲ್ಲಿ ಕಾಣುವ ಬುಲೆರೋ ವಾಹನದ ಮುಂಭಾಗದಲ್ಲಿ ಅಥವಾ ಹಿಂಭಾಗದಲ್ಲಿ ಕುರುಬನ ರಾಣಿ ಎಂದು ಬರೆದಿರುವ ಅಕ್ಷರಗಳು ಕಾಣುವುದಿಲ್ಲ ಎಂದರೆ ಸರಿ. ನಾನು ಪಂಚ ಸಾಕ್ಷಿದಾರರ ಸಮಕ್ಷಮ ಕೃತ್ಯ ಸ್ಥಳದಲ್ಲಾಗಲಿ ಅಥವಾ ಘಟನಾ ನಡೆದ ಸ್ಥಳದಲ್ಲಾಗಲಿ ಯಾವುದೇ ಮಹಜರ್ ಅನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಚಾಸಾ-1 ರವರ ಮರು ಹೇಳಿಕೆ ಮತ್ತು ಚಾಸಾ-6 ರಿಂದ ಚಾಸಾ-10 ರವರ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಕೃತ್ಯ ಸ್ಥಳಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಒದಗಿಸುವಂತೆ ಕೋರಿ ಯಾವುದೇ

ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಚಾಸಾ-1 ರವರಿಗೆ ಸಂಬಂಧಪಟ್ಟ ಯಾವುದೇ ಗಾಯದ ಪ್ರಮಾಣಪತ್ರ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಾಹನ ತಪಾಸಣಾ ಪರೀಕ್ಷೆ ಮಾಡಿಸಿರುವುದಿಲ್ಲ ಮತ್ತು ವರದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಯ ಕಾಲಕ್ಕೆ ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರು ಚಾಸಾ-1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ